**ಕರ್ನಾಟಕ ಸರ್ಕಾರ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ. 578/2019**

**ಪಿ.ಡಬ್ಲ್ಯೂ: 1**

**ಸಿ.ಡಬ್ಲ್ಯೂ: 1**

| | | |
|---|---|---|
| ಸಾಕ್ಷಿದಾರರ ಹೆಸರು | : | ಶಂಕರನಾಯ್ಕ |
| ತಂದೆಯ ಹೆಸರು | : | ಉದ್ಯಾನಾಯ್ಕ |
| ವಯಸ್ಸು | : | 65 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಕರಕುಚ್ಚಿ |

**ದಿನಾಂಕ: 18-10-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರವರಿಂದ**

ನವೆಂಬರ್ 2018ನೇ ಸಾಲಿನಲ್ಲಿ ಕರಕುಚ್ಚಿಯ ಸೇವಾಲಾಲ್ ಗ್ರಾಮದಲ್ಲಿರುವ ಸರ್ವೆ ನಂ33/1, 33/2, 33/3 ರಲ್ಲಿ 1-00 ಎಕರೆ 39 ಗುಂಟೆ ಜಮೀನಿಗೆ ಅತೀಕ್ರಮ ಪ್ರವೇಶ ಮಾಡಿ 35 ಚೀಲ ಅಡಿಕೆ ಮತ್ತು 500 ರಿಂದ 600 ತೆಂಗಿನಕಾಯಿಗಳನ್ನು ಆರೋಪಿತರು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ. ಅವುಗಳ ಅಂದಾಜು ಬೆಲೆ 65,000/- ಗಳಾಗಿರುತ್ತದೆ. ಸದರಿ ವಿಚಾರವಾಗಿ ನಾನು ಲಕ್ಕವಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿರುತ್ತೇನೆ.

ನಾನು ದೂರನ್ನು ನೀಡಿದ ಸುಮಾರು ಐದು ದಿನಗಳ ನಂತರ ಲಕ್ಕವಳ್ಳಿ ಪೊಲೀಸರು ಕೃತ್ಯ ನಡೆದ ಸ್ಥಳಕ್ಕೆ ಬಂದು ಸ್ಥಳ ಪಂಚನಾಮೆಯನ್ನು ಜರುಗಿಸಿರುತ್ತಾರೆ.

ಆನಂತರ, ಮತ್ತೊಂದು ದಿನ ಲಕ್ಕವಳ್ಳಿ ಪೊಲೀಸರು ಕರಕುಚ್ಚಿಯ ಜಗದೀಶ್ ಮನೆಯ ಹತ್ತಿರ ಬಂದು ಅಮಾನತ್ತು ಪಂಚನಾಮೆಯನ್ನು ಜರುಗಿಸಿ ಚಾಸಾ-8ರವರ ಕಡೆಯಿಂದ 5 ಚೀಲ (300 ಕೆಜಿ) ಅಡಿಕೆಯನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಅಮಾನತ್ತುಪಡಿಸಿಕೊಂಡ ಅಡಿಕೆ ಚೀಲಗಳನ್ನು ಪೊಲೀಸರು ಲಕ್ಕವಳ್ಳಿ ಪೊಲೀಸ್ ಠಾಣೆಗೆ ತೆಗೆದುಕೊಂಡು ಬಂದಿರುತ್ತಾರೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ದೂರಾಗಿದ್ದು, ಸದರಿ ದಾಖಲೆಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಸ್ಥಳ ಮಹಜರ್ ಆಗಿದ್ದು, ಸದರಿ ದಾಖಲೆಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಎರಡು ಛಾಯಚಿತ್ರಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-3 ಮತ್ತು 4 ಛಾಯಚಿತ್ರಗಳಲ್ಲಿ ತಮ್ಮ ಇರುವಿಕೆಯನ್ನು ಒಪ್ಪಿಕೊಂಡಿರುತ್ತಾರೆ.

***<u>ಪಾಟೀ ಸವಾಲು : ಆರೋಪಿ ಪರ</u>*** <u>ಶ್ರೀ ಎಸ್ ಎಸ್ ಸಿ</u> ***<u>ವಕೀಲರಿಂದ.</u>***

ನಿಪಿ-1ರಲ್ಲಿರುವ ಒಕ್ಕಣೆಯನ್ನು ನಾನೇ ಬರೆದಿರುತ್ತೇನೆ. 2 ಮತ್ತು 3ನೇ ಆರೋಪಿತರು ನನ್ನ ದೂರದ ಸಂಬಂಧಿಗಳು. 1ನೇ ಆರೋಪಿ ಕೃಷ್ಣನಾಯ್ಕ ನನ್ನ ಅಕ್ಕನ ಮಗ. ಕೃಷ್ಣನಾಯ್ಕ ಈಗ ಮರಣ ಹೊಂದಿರುತ್ತಾರೆಂದರೆ ಸರಿ. ಕೃಷ್ಣನಾಯ್ಕರ ಕುಟುಂಬ ಮತ್ತು ನಮ್ಮ ಕುಟುಂಬದ ನಡುವೆ ಕರಕುಚ್ಚಿ ಗ್ರಾಮದ ಸೇವಾಲಾಲ್ ನಗರದ ಸರ್ವೆ ನಂ.33/1, 33/2, 33/3 ರಲ್ಲಿ 1 ಎಕರೆ 39 ಗುಂಟೆ ವಿಸ್ತೀರ್ಣಕ್ಕೆ ಸಂಬಂಧಪಟ್ಟಂತೆ ಸಿವಿಲ್ ವ್ಯಾಜ್ಯ ಇತ್ತು ಎಂದರೆ ಸರಿ. ಸದರಿ ಜಮೀನು ನನ್ನ ಮಗನ ಹೆಸರಿನಲ್ಲಿದ್ದು, ಸದರಿ ವಿಚಾರಕ್ಕೆ ಸಂಬಂಧಪಟ್ಟಂತೆ ನಾನು ಪೊಲೀಸರಿಗೆ ಪಹಣಿ ಪತ್ರಿಕೆಯನ್ನು ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ನಾನು ಆರೋಪಿತರ ವಿರುದ್ಧ ಇದೇ ನ್ಯಾಯಾಲಯದಲ್ಲಿ 5 ಕ್ರಿಮಿನಲ್ ಪ್ರಕರಣವನ್ನು ದಾಖಲು ಮಾಡಿದ್ದೇನೆಂದರೆ ಸರಿ. ಆರೋಪಿತರು ಸರ್ವೆ ನಂ.33/1, 33/2, 33/3 ರಲ್ಲಿ 1 ಎಕರೆ 39 ಗುಂಟೆ ಜಮೀನಿನಲ್ಲಿ ಮನೆಯನ್ನು ಕಟ್ಟಿಕೊಂಡು ಅಲ್ಲೇ ವಾಸವಾಗಿದ್ದಾರೆಂದರೆ ಸರಿ. ಸದರಿ ಮನೆಯನ್ನು ನಾನು ಹಾಳು ಮಾಡಿದ್ದೇನೆಂದರೆ ಸರಿ. ಆರೋಪಿತರು ಸರ್ವೆ ನಂ.33/1, 33/2, 33/3 ರಲ್ಲಿ 1 ಎಕರೆ 39 ಗುಂಟೆ ಜಮೀನಿಗೆ ಅತೀಕ್ರಮ ಪ್ರವೇಶ ಮಾಡಿಲ್ಲ ಮತ್ತು ಸದರಿ ಜಮೀನಿನಲ್ಲಿ 35 ಚೀಲ ಅಡಿಕೆ ಮತ್ತು 500 ರಿಂದ 600 ತೆಂಗಿನಕಾಯಿಗಳನ್ನು ಕಳ್ಳತನ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಪ್ರಸ್ತುತ ಮೈಸೂರಿನಲ್ಲಿ ವಾಸವಾಗಿದ್ದೇನೆಂದರೆ ಸರಿಯಲ್ಲ. ನನ್ನ ತೋಟದಲ್ಲಿ ಕಳ್ಳತನವಾದ ಬಗ್ಗೆ ನನ್ನ ಪಕ್ಕದ ತೋಟದ ಮಾಲೀಕರಾದ ರಾಮನಾಯ್ಕರವರು ನನಗೆ ಫೋನ್ ಮೂಲಕ ತಿಳಿಸಿರುತ್ತಾರೆ. ಸ್ಥಳ ಮಹಜರ್ ಕ್ರಮ ಜರುಗಿಸುವ ಸ್ಥಳದಲ್ಲಿ ಎಷ್ಟು ಜನ ಇದ್ದರು ಎಂದು ನನಗೆ ಗೊತ್ತಿಲ್ಲ. ನಾನು ನಿಪಿ-2ರ ಮಹಜರಿಗೆ ಸಹಿಯನ್ನು ಹಾಕಿಲ್ಲ ಎಂದರೆ ಸರಿ. ನನ್ನ ಸಮಕ್ಷಮ ಜಗದೀಶನ ಮನೆಯಲ್ಲಿ 5 ಚೀಲ ಅಡಿಕೆಯನ್ನು ಅಮಾನತ್ತುಪಡಿಸಿಕೊಂಡಿದ್ದಾರೆ ಎಂದು ನಾನು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ನನಗೂ ಮತ್ತು ಆರೋಪತರ ಕುಟುಂಬದ ನಡುವೆ ಸಿವಿಲ್ ವ್ಯಾಜ್ಯ

ಇತ್ಯರ್ಥಕ್ಕೆ ಬಾಕಿ ಇರುವ ಕಾರಣ ನಾನು ಆರೋಪಿತರ ವಿರುದ್ದ ಸುಳ್ಳು ದೂರನ್ನು ದಾಖಲು ಮಾಡಿದ್ದೇನೆಂದರೆ ಸರಿಯಲ್ಲ. ಆರೋಪಿತರು ಯಾವುದೇ ರೀತಿಯ ಅಡಿಕೆ ಮತ್ತು ತೆಂಗಿನ ಕಾಯಿಗಳನ್ನು ಕಳ್ಳತನ ಮಾಡಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.*33/1, 33/ 2, 33/3* ರ *1* ಎಕರೆ *39* ಗುಂಟೆಯ ಖಾತೆಯು *1*ನೇ ಆರೋಪಿಯ ಹೆಸರಿನಲ್ಲಿದೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

*(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

*ಓ. ಕೇ. ಸ. ಇ. ಎ. ಒ.*

Sd/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**